# ಭವಿಷ್ಯ ಹೇಳುವ ಎಲೆಗಳು!

ಚಿತ್ರ–ಬರಹ:
**ದೇವರು ಆರ್. ಭಟ್ ಕಲಗಾರು**



ಮಧ್ಯೆ ಭವಿಷ್ಯ ಹೇಳುವ ಸಸ್ಯಗಳೂ ನಮ್ಮಲ್ಲಿವೆ! ಮಲೆನಾಡಿನ ಹಳ್ಳಿಗಳಲ್ಲಿ ಕೆಲವು ಮಕ್ಕಳು ಪರೀಕ್ಷೆ ಫಲಿತಾಂಶದ ಪೂರ್ವ ಸಮೀಕ್ಷೆಗಾಗಿ ಎಲೆಗಳನ್ನು ಮೊರೆ ಹೋಗುತ್ತಾರೆ...

ಮಲೆನಾಡಿನ ಗುಡ್ಡ ಬೆಟ್ಟಗಳಲ್ಲಿ ಹೆಚ್ಚಾಗಿ ಕಂಡುಬರುವ ಪುಟ್ಟ ಸಸ್ಯ ಪಟಪಟೆ ಎಲೆ ಗಿಡ. ಹೆಚ್ಚೆಂದರೆ ಹೂವಿನ ತೆನೆಯನ್ನೂ ಸೇರಿ ಅರ್ಧ ಅಡಿಯಿಂದ ಎರಡೂವರೆ ಅಡಿ ಎತ್ತರಕ್ಕೆ ಬೆಳೆಯುತ್ತದೆ. ಮೃದುವಾದ ದಪ್ಪ ಕಾಂಡ ಗಳನ್ನು ಹೊಂದಿದ ಸಸ್ಯದ ಎಲೆ, ಮಾರ್ಪಾಡಾದಂತೆ ದಪ್ಪಗಿರುವ ಎಲೆಗಳನ್ನು ಹೊಂದಿದೆ. ಎಲೆ ಅಂಡಾಕಾರವಾಗಿದ್ದು ಅಂಚಿನಲ್ಲಿ ಸಣ್ಣ ಸಣ್ಣ ಒಳಸುಳಿಗಳನ್ನು ಹೊಂದಿದೆ.

ಫೆಬ್ರುವರಿ –ಮಾರ್ಚ್ ತಿಂಗಳಲ್ಲಿ ಮೊಗ್ಗು ಬಿಟ್ಟು ಒಂದು ಒಂದೂ ವರೆ ಇಂಚು ಉದ್ದದ ಕಾವಿ ಬಣ್ಣದ ಹೂವುಗಳು ಅರಳುತ್ತವೆ. ಅಧೋಮುಖಿಯಾದ ಪುಟ್ಟ ಬಲೂನಿನಂತೆ ತೋರುವ ಮೊಗ್ಗುಗಳು ತೆಳು ಗುಲಾಬಿ ಬಣ್ಣದಿಂದ ಪ್ರಾರಂಭವಾಗಿ ತೆಳು ಹಸಿರಿನಿಂದ ಕೊನೆಗೊಳ್ಳುವುದು. ಹೂವಿನ ಅಂಡಾಶಯ ಬುಡದಿಂದ ಹೊರಡುವ ಹೂವು ಪುಷ್ಪ ಪೀಠದಿಂದ ಸ್ವಲ್ಪವೇ ಹೊರಚಾಚಿರುತ್ತದೆ.

ಮೊಗ್ಗಿನ ತುದಿ ಭಾಗವನ್ನು ಕೈಯಿಂದ ಹಿಚುಕಿ ಒಳಗಡೆ ಗಾಳಿ ಒತ್ತಡ ಉಂಟಾಗುವಂತೆ ಮಾಡಿಕೊಂಡು ಹಣೆಗೆ ಬಡಿದುಕೊಂಡಾಗ ಪಟ್ ಎನ್ನುವ ಶಬ್ದ ಬರುವುದರಿಂದಲೋ, ಅಥವಾ ದಪ್ಪದಾದ ಹಸಿ ಎಲೆಗಳನ್ನು ಮುರಿದಾಗ ಸಣ್ಣದಾಗಿ ಪಟ್ ಶಬ್ದ ಬರುವುದಕ್ಕಾಗಿಯೋ ಇದನ್ನು ಪಟಪಟೆ ಗಿಡ ಎಂದೇ ಕರೆಯುವುದು ವಾಡಿಕೆ.

ಪರೀಕ್ಷೆ ಸಮೀಪಿಸುತ್ತಿರುವಾಗ ವಿದ್ಯಾರ್ಥಿಗಳು ಬಲಿತ ಹಸಿ ಎಲೆಯೊಂದನ್ನು ತಂದು ಕಷ್ಟ ಎನ್ನಿಸಿದ ವಿಷಯದ ಪುಸ್ತಕದ ಮಡಿಕೆಯಲ್ಲಿ ಹಾಕಿಟ್ಟು ತಮ್ಮ ಪರೀಕ್ಷಾ ಫಲಿತಾಂಶದ ಪೂರ್ವ ಸಮೀಕ್ಷೆ ನಡೆಸುವುದುಂಟು. ಪುಸ್ತಕದಲ್ಲಿಟ್ಟ 8–10 ದಿನಗಳಲ್ಲಿ ಎಲೆಗಳ ಅಂಚಿನಲ್ಲಿರುವ ಒಳಸುಳಿಗಳಿಂದ ಬಿಳಿ ಬಣ್ಣದ ಚಿಕ್ಕ ಚಿಕ್ಕ ಬೇರು ಬರಲು ಪ್ರಾರಂಭಿಸಿದರೆ ಪಾಸು! ಹಾಗೆ ಬೇರು ಮೂಡದಿದ್ದಲ್ಲಿ ಆ ವರ್ಷದ ಪರೀಕ್ಷೆಯಲ್ಲಿ ಫೇಲಾಗುತ್ತದೆ ಎಂಬ ಅಚಲ ನಂಬಿಕೆ ವಿದ್ಯಾರ್ಥಿಗಳಿಗೆ!

ಹಾಗಾಗಿಯೇ ಇದು ವಿದ್ಯಾರ್ಥಿಗಳಿಗೆ 'ಪಾಸು – ಫೇಲು ಗಿಡ' ಎಂದೇ ಪರಿಚಿತ.

ಎಲ್ಲೆಂದರಲ್ಲಿ ಕಡಿಮೆ ನೀರಿನಲ್ಲೂ ಬೆಳೆಯುವ ಈ ಸಸ್ಯದ ಎಲೆಯ ರಸ ಮೂತ್ರಕೋಶದ ತೊಂದರೆಗೆ ಅತ್ಯುತ್ತಮ ಔಷಧವಾಗಿ ಬಳಕೆಯಾಗುತ್ತದೆ. ಮೂತ್ರಕೋಶದಲ್ಲಿ ಕಲ್ಲು ಉಂಟಾಗುವಿಕೆಗೆ ಎಲೆಗಳ ರಸವನ್ನು ಬಳಸಲಾಗುವುದು. ಹಾಗೆಯೇ ವಿಶೇಷವಾಗಿ ಯೂರಿನ್ ಇನ್ಫೆಕ್ಷನ್‌ಗೂ ಔಷಧವಾಗಿ ಉಪಯೋಗಿಸಲಾಗುತ್ತಿದೆ.